ಶ್ರೀ ಯು.ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್ ಕೊರೆಸಿ ಒಂದು ವಾರದೊಳಗೆ ಕೆ.ಇ.ಬಿ. ರವರು ವಿದ್ಯುತ್ ಕನೆಕ್ಷನ್ ಕೊಡುವುದರ ಬಗ್ಗೆ ಸರ್ಕಾರದಿಂದ ಆದೇಶವಾಗಬೇಕು. ಎರಡನೇ ವಿಚಾರ ಏನೆಂದರೆ, ತಾವು ಸ್ಕೇರ್‌ಸಿಟಿ ಕೆಲಸಗಳಿಗೆ ದುಡ್ಡನ್ನು ಕೊಡುತ್ತೀರಿ ಆದರೆ, ಅದರಲ್ಲಿ ಹಲವಾರು ಕಾನೂನು ತೊಡಕುಗಳಿಗವೆ. ಅದರಲ್ಲಿ ಕೇವಲ ಬೋರ್‌ವೆಲ್ ಕೊರೆಯಬಹುದೇ ಹೊರತು ಪೈಪ್ ಲೈನ್ ಹಾಕುವುದಕ್ಕೆ ಅದರಲ್ಲಿ ಸಾಧ್ಯವಾಗುವುದಿಲ್ಲ. ಮತ್ತೆ ಅದನ್ನು extension ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಈ ರೀತಿಯಾದ ಕಾನೂನು ತೊಡಕುಗಳು ಯಾವುದಿದೆ ಅವುಗಳನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು 30 ಲಕ್ಷ ರೂಪಾಯಿ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಅವರಿಗೆ ಅಭಿನಂದಿಸಿ ಅದನ್ನು ಸ್ವಾಗತ ಮಾಡುತ್ತೇನೆ. ಈ 30 ಲಕ್ಷ ರೂಪಾಯಿಗೆ ಮತ್ತೆ 20 ಲಕ್ಷ ಸೇರಿಸಿ 50 ಲಕ್ಷ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ದಕ್ಷಿಣ ಕನ್ನಡ ಜಿಲ್ಲೆಯವರಾಗಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷವಾದಂತ ಒಂದು ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :– ಮಂಗಳೂರು ವಿಧಾನ ಸಭಾ ಕ್ಷೇತ್ರವಾಗಿದೆ. ಅಲ್ಲಿನ ತುಮ್ಮಿಯಲ್ಲಿರುವ ವೆಂಟೆಂಡ್ ಡ್ಯಾಂಗೆ ತಾವು ಹೆಚ್ಚಿನ ಒಂದು ಒತ್ತನ್ನು ಕೊಟ್ಟರೆ ಆ ಜಿಲ್ಲೆಯಲ್ಲಿರುವ ಮಂಗಳೂರು ಮತ್ತು ಮಹಾನಗರ ಪಾಲಿಕೆಯ ಸಮಸ್ಯೆ ಖಂಡಿತ ಬಗೆಯರಿಸುವುದಕ್ಕೆ ಸಾಧ್ಯವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಯು.ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರ ಹೆಸರಿಗೆ ಮಾತ್ರ ಮಂಗಳೂರು ಎಂದು ಇದೆ. ಆದರೆ, ಕ್ಷೇತ್ರದ ಹೆಚ್ಚಿನ ಭಾಗ ಗ್ರಾಮೀಣ ಪ್ರದೇಶದಲ್ಲಿದೆ.

2. **ವಿಷಯ :– ರಾಜ್ಯ ಸರ್ಕಾರದ ತೊಗರಿ ಬೆಳೆಗಾರರ ಅನುಕೂಲಕ್ಕಾಗಿ ರೂ. 12.00 ಕೋಟಿ ಬಿಡುಗಡೆ ಮಾಡಿ ತೊಗರಿ ಬೇಳೆ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರಗಳು ರೂ. 12.00 ಕೋಟಿ ಖರ್ಚಾದ ನಂತರ ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತವೆ. ಈ ಕ್ರಮದಿಂದ ತೊಗರಿ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಬೆಂಬಲ ಬೆಲೆ ನೀಡಿ ಈ ಕೇಂದ್ರಗಳನ್ನು ಪುನರ್‌ಸ್ಥಾಪಿಸಿ ರೈತರ ಹಿತರಕ್ಷಣೆ ಕಾಪಾಡುವುದರ ಬಗ್ಗೆ.**

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ತೊಗರಿ ಬೆಳೆಗಾರರ ಅನುಕೂಲಕ್ಕಾಗಿ ರೂ. 12.00 ಕೋಟಿ ಬಿಡುಗಡೆ ಮಾಡಿ ತೊಗರಿ ಬೇಳೆ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ

ಕೇಂದ್ರಗಳು ರೂ. 12.00 ಕೋಟಿ ಖರ್ಚಾದ ನಂತರ ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ. ಈ ಕ್ರಮದಿಂದ ತೊಗರಿ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಬೆಂಬಲ ಬೆಲೆ ನೀಡಿ ಈ ಕೇಂದ್ರಗಳನ್ನು ಪುನರ್‌ಸ್ಥಾಪಿಸಿ ರೈತರ ಹಿತರಕ್ಷಣೆ ಕಾಪಾಡುವುದರ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು :– ಈಗಾಗಲೇ ಮಾನ್ಯ ಸಚಿವರು ಉತ್ತರ ಪ್ರತಿಯನ್ನು ಕೊಟ್ಟಿದ್ದಾರೆ. ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳಿ. ಆನಂತರ ಉತ್ತರ ಕೊಡುತ್ತಾರೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– 2011–12 ನೇ ಸಾಲಿನ ಮುಂಗಾರು ಹಂಗಾಮಿನ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಗೆ ರೂ. 3,200/– ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ತೊಗರಿ ಕಟಾವಿನ ಮೊದಲ ಎರಡು ತಿಂಗಳ ಕಾಲಾವಧಿಗೆ (ಜನವರಿ ಮತ್ತು ಫೆಬ್ರವರಿ ತಿಂಗಳಿಗೆ ಮಾತ್ರ) ಪ್ರತಿ ಕ್ವಿಂಟಾಲ್‌ಗೆ ರೂ. 500/– ಗಳ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಘೋಷಿಸಿದೆ. ಈ ಪ್ರೋತ್ಸಾಹಧನವನ್ನು ತೊಗರಿಯ ಮಾರುಕಟ್ಟೆ ಬೆಲೆಯು ಪ್ರತಿ ಕ್ವಿಂಟಾಲಿಗೆ ರೂ. 3,200/– ಗಳಿಗಿಂತಲೂ ಕಡಿಮೆಯಾದ ಸಂದರ್ಭದಲ್ಲಿ ನೀಡಲಾಗುವುದಾಗಿ ಭಾರತ ಸರ್ಕಾರದಿಂದ ನಿಗದಿಪಡಿಸಲಾಗಿದೆ.

ಪ್ರಸ್ತುತ ವರ್ಷ ಅಂದರೆ 2011–12ನೇ ಸಾಲಿನಲ್ಲಿಯೂ ಸಹ ಮಾರುಕಟ್ಟೆಯಲ್ಲಿ ತೊಗರಿ ಬೆಲೆಯು ಪ್ರತಿ ಕ್ವಿಂಟಾಲ್‌ಗೆ ರೂ. 3,200/– ಕ್ಕಿಂತ ಹೆಚ್ಚಿದ್ದರೂ ಸಹ ಆ ಭಾಗದ ಎಲ್ಲಾ ಮಾನ್ಯ ಶಾಸಕರುಗಳು ಹಾಗೂ ಇತರೆ ಶಾಸಕರ ಕೋರಿಕೆಯಂತೆ ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತೊಗರಿ ಮಂಡಳಿಯಿಂದ ಕ್ವಿಂಟಾಲ್‌ಗೆ ರೂ. 4,000/– ಗಳಂತೆ ತೊಗರಿ ಮಂಡಳಿಯಲ್ಲಿ ರೂ. 1.70 ಕೋಟಿಗಳ ಲಭ್ಯವಿದ್ದ ಅನುದಾನವನ್ನು ಬಳಸಿಕೊಂಡು ರೈತರಿಂದ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ. 4,000/– ಗಳಂತೆ ಖರೀದಿಸಲಾಗಿದೆ. ಅಲ್ಲದೆ, ಹೆಚ್ಚುವರಿಯಾಗಿ ರೂ. 10.00 ಕೋಟಿಗಳ ರಾಜ್ಯ ಸರ್ಕಾರದ ಅನುದಾನವನ್ನು ಹಂತ ಹಂತವಾಗಿ ತೊಗರಿ ಅಭಿವೃದ್ಧಿ ಮಂಡಳಿಗೆ ನೀಡಿ ರೈತರಿಂದ ತೊಗರಿಯನ್ನು ಖರೀದಿಸಲಾಗಿದೆ. ಈ ರೀತಿ ಖರೀದಿಸಿದ ತೊಗರಿಯನ್ನು ಶಿಕ್ಷಣ ಇಲಾಖೆಯ ಮಧ್ಯಾಹ್ನ ಬಿಸಿಯೂಟದ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಉದ್ದೇಶಿಸಿದೆ.

ಸರ್ಕಾರದ ಆದೇಶದ ಮೇರೆಗೆ 2011–12ನೇ ಸಾಲಿನಲ್ಲಿ ತೊಗರಿ ಮಂಡಳಿಯ ವತಿಯಿಂದ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ. 4,000/– ಗಳಂತೆ ಖರೀದಿಸಲು ಗುಲ್ಬರ್ಗಾ, ಯಾದಗಿರಿ

ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟಾರೆ 16 ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, NCDEX Spot Exchange Limited ಮೂಲಕ ಖರೀದಿ ಪ್ರಕ್ರಿಯೆಯನ್ನು ದಿನಾಂಕ : 15.02.2012 ರಂದು ಪ್ರಾರಂಭಿಸಲಾಗಿದೆ. ಪ್ರಾರಂಭಿಕವಾಗಿ ಮಂಡಳಿಯಲ್ಲಿ ಲಭ್ಯವಿರುವ ರೂ. 1.70 ಕೋಟಿ ಹಣವನ್ನು ಬಳಸಿಕೊಳ್ಳಲಾಗಿರುತ್ತದೆ. ತದನಂತರದಲ್ಲಿ, ಆವರ್ತನಿಧಿಯಿಂದ ಮಂಡಳಿಗೆ ನೇರವಾಗಿ ಬಿಡುಗಡೆ ಮಾಡಲಾದ ರೂ. 2.00 ಕೋಟಿ (ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೊದಲು ಬಿಡುಗಡೆ ಮಾಡಿ ನಂತರ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿತ) ಸಾಲವನ್ನು ಮತ್ತು ರೂ. 3.00 ಕೋಟಿ (ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೊದಲು ಬಿಡುಗಡೆ ಮಾಡಿ ನಂತರ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿತ) ಸಾಲವನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ದಿನಾಂಕ 27.02.2012 ರಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರೊಂದಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಇದಾದ ನಂತರ ದಿನಾಂಕ : 05.03.2012 ರಂದು ಬಿಡುಗಡೆ ಮಾಡಲಾದ ರೂ. 2.50 ಕೋಟಿ ಮತ್ತು ದಿನಾಂಕ : 09.03.2012 ರಂದು ಬಿಡುಗಡೆ ಮಾಡಿರುವ ರೂ. 2.50 ಕೋಟಿ ಸಾಲಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರೊಂದಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಇದರಿಂದಾಗಿ NCDEX spot Exchange Limited ಸಂಸ್ಥೆಯ ನಿಯಮಗಳಲ್ಲಿ third party liability ಅವಕಾಶವಿಲ್ಲದ ನಿಮಿತ್ತ ಪ್ರತಿ ದಿನದ ಖರೀದಿ ರೂ. 1.25 ಕೋಟಿ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಖರೀದಿ ಕೇಂದ್ರಗಳನ್ನು ಪ್ರಾರಂಭಿಸುವುದರೊಂದಿಗೆ ಖರೀದಿಯನ್ನು ಸಹ ಸೀಮಿತಗೊಳಿಸಲಾಗಿದೆ.

ಪ್ರಸ್ತುತ 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿ ಖರೀದಿಗೆ ಸಂಬಂಧಿಸಿದಂತೆ ರೂ. 11.73 ಕೋಟಿ ಹಣವನ್ನು ಬಳಸಿಕೊಂಡು ಇದುವರೆಗೆ 25837.7 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿರುತ್ತದೆ ಮತ್ತು ಇದರಿಂದ ಅಂದಾಜು 1796 ರೈತರು ಪ್ರಯೋಜನವನ್ನು ಪಡೆದಿರುತ್ತಾರೆ. ಮಾರುಕಟ್ಟೆ ದರದಲ್ಲಿ ಸುಧಾರಣೆ ಇಲ್ಲದಿರುವುದರಿಂದ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಲು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತವು ಈ ಕೆಳಗಿನ ಕಾರಣಗಳನ್ನು ಪರಿಗಣಿಸಿರುತ್ತದೆ : –

❖ ಮಂಡಳಿಯ ವತಿಯಿಂದ ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮದಡಿ, ಇದುವರೆಗೆ ರೂ. 11.73 ಕೋಟಿ ವೆಚ್ಚವನ್ನು ಭರಿಸಿ, ಜರುಗತ್ತಿರುವ ಖರೀದಿ ಕಾರ್ಯಾಚರಣೆಯಿಂದ ಮಾರುಕಟ್ಟೆಯಲ್ಲಿ ಮಾದರಿ ದರವು ಹೆಚ್ಚಿರುವುದಿಲ್ಲ.

❖ ಸಣ್ಣ ಮತ್ತು ಮಧ್ಯಮ ರೈತರ ಸಮುದಾಯಕ್ಕೆ ಹೆಚ್ಚಿನ ನಿರೀಕ್ಷಿತ ಲಾಭ ನೀಡುವುದು ಸಾಧ್ಯವಾಗುತ್ತಿಲ್ಲ.

❖ ಮಂಡಳಿಗೆ ಸಾಲವನ್ನು ಪಡೆದು ಖರೀದಿಸುವಲ್ಲಿ ಹಾಗೂ ಹೆಚ್ಚಿನ ದರದಲ್ಲಿ ಖರೀದಿಸಲಾದ ತೊಗರಿಗೆ ನಿರೀಕ್ಷಿತ ಮಾರಾಟ ದರ ದೊರೆಯದಿದ್ದಲ್ಲಿ ಮಂಡಳಿಯು ಹೆಚ್ಚಿನ ನಷ್ಟವನ್ನು ಅನುಭವಿಸುವ ಸಂಭವವಿರುತ್ತದೆ.

❖ 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿಯು ಮಾರುಕಟ್ಟೆಗೆ ಬರುವ ಋತುಕಾಲವು ಮುಗಿದ್ದಿದ್ದು ಅದರಂತೆ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿಯು ಮಾರುಕಟ್ಟೆಗೆ ಬರುವ ಪ್ರಮಾಣವು ಸಹ ಗಣನೀಯವಾಗಿ ಕಡಿಮೆಯಾಗುತ್ತಿದೆ.

❖ 2010–11ನೇ ಸಾಲಿನಲ್ಲಿ ಇದೇ ತರಹ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿರುವುದರಿಂದ ಮಾರುಕಟ್ಟೆ ದರದಲ್ಲಿ ಸುಧಾರಣೆ ಆಗಿ ರೈತರು ತಮ್ಮ ತೊಗರಿಯನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಧಾವಿಸಿದ್ದರು. ಆದರೆ, 2011–12ನೇ ಸಾಲಿನ ಮುಂಗಾರು ಹಂಗಾಮಿನ ತೊಗರಿಯು ಮಾರುಕಟ್ಟೆ ದರದಲ್ಲಿ ಸುಧಾರಣೆ ಇಲ್ಲದಿರುವುದರಿಂದ ಖರೀದಿ ಕೇಂದ್ರಕ್ಕೆ ಬರುವ ರೈತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ಅಲ್ಲದೆ, ರೈತರನ್ನು ಮಾರುಕಟ್ಟೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಲ್ಲಾಳಿಗಳು ಖರೀದಿ ಕೇಂದ್ರಕ್ಕೆ ಕರೆ ತಂದು ಈ ಮೊದಲೇ ಕಡಿಮೆ ದರದಲ್ಲಿ ವ್ಯಾಪಾರಸ್ಥರು ರೈತರಿಂದ ಖರೀದಿಸಿದ ತೊಗರಿಯನ್ನು ದುರ್ಲಾಭ ಪಡೆಯುವ ದುರುದ್ದೇಶದಿಂದ ರೈತರ ಮುಖಾಂತರ ಅದೇ ತೊಗರಿಯನ್ನು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ಮಾರಾಟ ಮಾಡಿಸುತ್ತಿದ್ದಾರೆ. ಇದರಿಂದಾಗಿ ನಿಜವಾದ ರೈತನಿಗೆ ಸರ್ಕಾರದ ನೆರವು ಸಿಗದೆ ವ್ಯಾಪಾರಸ್ಥರು ಹಾಗೂ ದಲ್ಲಾಳಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ರೈತರಿಗೆ ಸಿಗಬೇಕಾದ ಲಾಭದಲ್ಲಿ ಪಾಲುದಾರರಾಗುತ್ತಿರುವುದು ಬಲ್ಲ ಮೂಲಗಳಿಂದ ತಿಳಿದು ಬಂದಿರುತ್ತದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದು ಉತ್ತರವೇ? ಏಕೆಂದರೆ, ಇದು ಬಹಳ ನಿರಾಶದಾಯಕವಾದಂಥ ಉತ್ತರವಾಗಿದೆ.

ಇದು ಖಂಡಿತವಾಗಿ ಉತ್ತರವಲ್ಲ. ಇಲ್ಲಿ ತೊಗರಿ ಬೇಳೆ ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆಂದು ಕಳೆದ ಸಾರಿ ಸದನದಲ್ಲಿ ಅವರು ಆಶ್ವಾಸನೆಯನ್ನು ಕೊಟ್ಟಿದ್ದರು. ಅದರಂತೆ ಖರೀದಿ ಕೇಂದ್ರವನ್ನು ಸ್ಥಾಪನೆ ಮಾಡಿದ್ದರು. ಅದಕ್ಕೆ ನಾವು ಸ್ವಾಗತ ಕೂಡ ಮಾಡಿದ್ದೇವೆ. ಈಗಾಗಲೇ 12 ಕೋಟಿ ರೂಪಾಯಿ ಖರ್ಚಾಗಿದ್ದು, ಇನ್ನು ಮುಂದೆ ಖರೀದಿ ಮಾಡುವುದಿಲ್ಲ, ಮಧ್ಯವರ್ತಿಗಳು ಇನ್ನು ಮುಂದೆ ಮಾಡುತ್ತಾರೆಂದರೆ ಹೇಗೆ? ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಹೆಚ್ಚು ಜನರು ತೊಗರಿಯನ್ನು ಬೆಳೆಯುತ್ತಾರೆ. 12 ಕೋಟಿ ರೂಪಾಯಿಗಳಷ್ಟು ಖರೀದಿ ಮಾಡಿದ್ದು, ಇನ್ನು ಮುಂದೆ ಖರೀದಿ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ? ಇವತ್ತಿನ ದಿವಸ ಆಲೂಗೆಡ್ಡೆ, ಈರುಳ್ಳಿಯನ್ನು ಖರೀದಿ ಮಾಡುವುದಕ್ಕೆ 70 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಮಾನ್ಯ ರೇವಣ್ಣನವರೆ, ನಾನು ಮಾತನಾಡಿದ ನಂತರ ತಾವು ಮಾತನಾಡಿ. ಉತ್ತರ ಕರ್ನಾಟಕ ವಿಷಯ ಬಂದಾಗ ನೀವೇ ಅಡ್ಡ ಬರುತ್ತೀರಿ. ಉಳ್ಳಾಗೆಡ್ಡೆ ಖರೀದಿಗೆ ಎಷ್ಟು ಖರ್ಚು ಮಾಡಲಾಗಿದೆ. ಎಂಬುದನ್ನು ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಆಲೂಗೆಡ್ಡೆಯದು ಕೂಡ ಇದೆ.

ಅಧ್ಯಕ್ಷರು :– ಆಲೂಗೆಡ್ಡೆಯದು ಈಗಾಗಲೇ ಆಗಿದೆ.

(ಗೊಂದಲ)

ಶ್ರೀ ವಿ. ಉಮೇಶ್ ಕತ್ತಿ :– ಮಾನ್ಯ ಅಧ್ಯಕ್ಷರೆ, ಅವರು ಆಲೂಗೆಡ್ಡೆ ಮತ್ತು ಉಳ್ಳಾಗೆಡ್ಡೆ ಒಂದೇ ಎಂದು ಅವರು ತಿಳಿದುಕೊಂಡಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾವು ರೈತರಾಗಿದ್ದು, ರೈತರ ಮನೆಯಲ್ಲಿ ಹುಟ್ಟಿದ್ದೇವೆ. ಆದ್ದರಿಂದ, ಆಲೂಗೆಡ್ಡೆ ಮತ್ತು ಉಳ್ಳಾಗೆಡ್ಡೆ ಯಾವುದೆಂದು ನಮಗೂ ಸಹ ಗೊತ್ತಿದೆ. ಉಳ್ಳಾಗೆಡ್ಡೆ ಎಷ್ಟು ಖರೀದಿ ಮಾಡಲಾಗಿದೆ ಎಂಬ ಬಗ್ಗೆ ಹೇಳಿ? ಕೊಳೆತು ಹೋಗುವಂಥ ಪದಾರ್ಥಕ್ಕೆ 70 ರಿಂದ 80 ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ತೊಗರಿ ಬೇಳೆಯನ್ನು 3–4 ವರ್ಷ ಇಟ್ಟರೂ ಸಹ ಹಾಳಾಗುವುದಿಲ್ಲ. ಮಧ್ಯಾಹ್ನ ಬಿಸಿ ಊಟಕ್ಕೂ ತೊಗರಿ ಬೇಳೆಯನ್ನು ಉಪಯೋಗ ಮಾಡಬಹುದು. ನೀವು ಬೆಳಗಾಂ ಭಾಗದಲ್ಲಿದ್ದೀರಿ. ಆದ್ದರಿಂದ ತೊಗರಿ ಬೆಳೆಯತಕ್ಕಂಥ ರೈತರ ಬಗ್ಗೆ ನಿಮಗೆ ಏನೂ ಕಾಳಜಿ ಇಲ್ಲ ಎನ್ನತಕ್ಕಂಥದ್ದು ನಿಮ್ಮ ಉತ್ತರದಲ್ಲಿ ತೋರಿಸುತ್ತದೆ. ಈ ರೀತಿಯಾದ ಉತ್ತರವನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನು ನಾವು protest ಮಾಡುತ್ತೇವೆ.

ಅಧ್ಯಕ್ಷರು :– ತಾವು ಅಲ್ಲಿಯೇ ಕುಳಿತುಕೊಳ್ಳಿ. ಮಾನ್ಯ ಸಚಿವರು ಇನ್ನೂ ಉತ್ತರವನ್ನೇ ಹೇಳಿಲ್ಲ. ಉತ್ತರ ಹೇಳಿದ ನಂತರ ತಾವು ಬನ್ನಿ. ಒಂದು ನಿಮಿಷ ಅಲ್ಲಿಯೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಈಶ್ವರ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿ 18 ಸಾವಿರ ಹೆಕ್ಟೇರ್ ಭೂಮಿಯಲ್ಲಿ ತೊಗರಿ ಬೆಳೆಯುತ್ತಾರೆ. ಈಗಾಗಲೇ ಇದರಲ್ಲಿ ಅರ್ಧ ಹಾಳಾಗಿ ಹೋಗಿದೆ. ಅರ್ಧ ಹೋದರೂ ಉಳಿದ 9 ಸಾವಿರ ಹೆಕ್ಟೇರ್ ಭೂಮಿಯಲ್ಲಿ 1 ಲಕ್ಷ ಕ್ವಿಂಟಾಲ್‌ಗಿಂತ ಜಾಸ್ತಿ ತೊಗರಿ ಬೇಳೆಯಾಗಿದೆ. ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ತೊಗರಿ ಬೇಳೆಗೆ 3000 ರಿಂದ 3200 ರೂಪಾಯಿ ಇತ್ತು. ಆದರೆ ಇವರು ಅಲ್ಲಿ ಒಂದು ಕ್ವಿಂಟಾಲ್‌ಗೆ ಕೇವಲ 2000 ರೂಪಾಯಿಗೆ ಖರೀದಿ ಮಾಡಿದ್ದಾರೆ. ಇದರಲ್ಲಿಯೂ ಕೂಡ ಅಲ್ಲಿ ತಾರತಮ್ಯವಾಗಿದೆ. ಕೇವಲ 2 ರಿಂದ 3 ದಿವಸ ಮಾತ್ರ ಖರೀದಿ ಮಾಡಿ ಖರೀದಿ ಕೇಂದ್ರವನ್ನು ರದ್ದು ಮಾಡಿದ್ದಾರೆ. ಎಪಿಎಂಸಿ ಯಲ್ಲಿನ ವ್ಯಾಪಾರಸ್ಥರು ಖರೀದಿ ಮಾಡುತ್ತಾರೆಂದು ಹೇಳುತ್ತಾರೆ. ವ್ಯಾಪಾರಸ್ಥರು ಖರೀದಿ ಮಾಡುವುದಕ್ಕೆ ತಡೆಯುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೇ? ಇದನ್ನು ತಡೆಯುವುದಕ್ಕೆ ಜಿಲ್ಲಾಧಿಕಾರಿಗಳು ಮತ್ತೊಬ್ಬರು ಇದ್ದಾರೆ. ಇವತ್ತಿನ ದಿವಸ ಯಾರಾದರೂ ವ್ಯಾಪಾರಸ್ಥರು ಖರೀದಿ ಮಾಡಿದರೆ ಅವರ ಮೇಲೆ ಕಾನೂನಬದ್ಧವಾಗಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಿ ಮತ್ತೆ ಅಂಥವರನ್ನು ಅರೆಸ್ಟ್ ಮಾಡಿ. ನೀವೇಕೆ ರೈತರಿಗೆ ತೊಂದರೆ ಕೊಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ತಾವು ಬಿಡದೆ ಇದ್ದರೆ ಹೇಗೆ?

(ಗೊಂದಲ)

ಶ್ರೀ ಈಶ್ವರ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ತೊಗರಿ ಖರೀದಿಯನ್ನು ನಿರಂತರವಾಗಿ ಮುಂದುವರಿಸುತ್ತೇವೆಂದು ಅವರು ಹೇಳಿದ್ದಾರೆ. ಅದ್ದರಿಂದ, ಅವರು ಹೇಳಿದಂತಹ ಮಾತನ್ನು ಅವರು ಉಳಿಸಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಪುನಃ ಯಾರಾದರೂ ವ್ಯಾಪಾರಸ್ಥರು ಬಂದರೆ ಬಿಡಿ. ರೂ. 1000 ಕೋಟಿ ಆವರ್ತನಿಧಿ ಇದೆ ಎಂದು ಹೇಳಿದ್ದೀರಿ. 1000 ಕೋಟಿ ರೂಪಾಯಿ ಎಲ್ಲಿದೆ? 650 ಕೋಟಿ ರೂಪಾಯಿ ಇದ್ದರೆ, ತೊಗರಿ ಬೇಳೆ ಖರೀದಿ ಮಾಡುವುದಕ್ಕೆ 50 ಕೋಟಿ ರೂಪಾಯಿ ಕೊಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆ. ಪೆಪ್ಪರ್‌ಮೆಂಟ್‌ಗೆ ಕೊಟ್ಟ ರೀತಿಯಲ್ಲಿ 1 ಕೋಟಿ, 50 ಲಕ್ಷ

ಅಥವಾ 2 ಕೋಟಿ ರೂಪಾಯಿ ಕೊಟ್ಟರೆ ಉಪಯೋಗವಾಗುವುದಿಲ್ಲ. ಕೇವಲ 12 ಕೋಟಿ ರೂಪಾಯಿ ಕೊಟ್ಟು ಮೂಗಿಗೆ ತುಪ್ಪ ಹಚ್ಚುವಂತಹ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಇದು ರೈತರಿಗೆ ಮೋಸ ಮಾಡುವಂಥ ಕೆಲಸವಾಗಿದೆ. ತೊಗರಿ ಖರೀದಿ ಮಾಡುವುದಕ್ಕೆ ತಕ್ಷಣ ಆದೇಶ ಮಾಡಬೇಕೆಂದು ನಿಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :– ಆಯಿತು. ಮಾನ್ಯ ಸುಭಾಷ್ ಗುತ್ತೇದಾರ್‌ರವರೇ, ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :– ಉತ್ತರ ಹೇಳುವುದಕ್ಕೆ ಅವಕಾಶ ಕೊಡದೆ ಇದ್ದರೆ ಹೇಗೆ?

(ಗೊಂದಲ)

(ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಧರಣಿ ಮಾಡಲು ಸದನ ಬಾವಿಗೆ ಬರುವ ವೇಳೆಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು :– ನಿಮ್ಮ ಸೀಟಿಗೆ ಹೋಗಿ ಮಾತನಾಡಿ. ಇಲ್ಲದಿದ್ದರೆ ದಾಖಲೆಗೆ ಹೋಗುವುದಿಲ್ಲ.

(ಈ ಹಂತದಲ್ಲಿ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ರಹೀಮ್ ಖಾನ್, ಶ್ರೀ ಈಶ್ವರ ಭೀಮಣ್ಣ ಖಂಡ್ರೆ, ಶ್ರೀ ರಾಜಶೇಖರ್ ಬಸವರಾಜ್ ಪಾಟೀಲ್‌ರವರು ಧರಣಿ ಮಾಡಲು ಸದನ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು :– ಉತ್ತರ ಹೇಳುವುದಕ್ಕೆ ಬಿಡದೆ ಇದ್ದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :– You seek clarification. ನೀವು ಮೊದಲು ಕ್ಲಾರಿಫಿಕೇಶನ್ ಕೇಳಿ? ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಅದು ನಿಮಗೆ ಸಮಾಧಾನವಾಗದಿದ್ದರೆ ಮುಂದಿನ ಕ್ರಮಕ್ಕೆ ಹೋಗಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :– ಸದನ ಬಾವಿಯಲ್ಲಿ ನಿಂತುಕೊಂಡಿದ್ದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

ಅಧ್ಯಕ್ಷರು :– ತಾವುಗಳು ತಮ್ಮ ಸ್ಥಳಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು :– ಬಾವಿಯಲ್ಲಿ ನಿಂತುಕೊಂಡು ಮಾತನಾಡಬೇಡಿ. ನಿಮ್ಮ ಸೀಟ್‌ಗೆ ಹೋಗಿ ಮಾತನಾಡಿ. ದಯವಿಟ್ಟು ನೀವು ಅಲ್ಲಿಂದ ಮಾತನಾಡಬೇಡಿ.

ಈ ರೀತಿಯಾಗಿ ಮಾತನಾಡಿದರೆ ಹೇಗೆ? ಅಲ್ಲಿಂದ ಮಾತನಾಡಿದರೆ ಯಾವುದು ಕೂಡ ದಾಖಲೆಗೆ ಹೋಗುವುದಿಲ್ಲ. ಮೊದಲು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸುಭಾಷ್ ಗುತ್ತೇದಾರ್‌ರವರು ಈಗಾಗಲೇ ಇಲ್ಲಿಗೆ ಬಂದಿದ್ದಾಗ, ಮುಂದೆ ಈ ವಿಷಯ ಚರ್ಚೆಗೆ ಬರುತ್ತದೆಂದು ಹೇಳಿದ ಮೇಲೆ ಅವರು ಹೋದರು.

ಅಧ್ಯಕ್ಷರು :– ನಾನು ಈಗಾಗಲೇ ಮಾನ್ಯ ಸುಭಾಷ್ ಗುತ್ತೇದಾರ್‌ರವರನ್ನು ಮಾತನಾಡುವುದಕ್ಕೆ ಹೇಳಿದ್ದೇನೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಒಂದೇ ವಿಷಯವಾಗಿರುವುದರಿಂದ ಅವರೂ ಕೂಡ ಮಾತನಾಡಲಿ. ಆನಂತರ ನಾವು ಸಹ ಸದನದ ಬಾವಿಯೊಳಗೆ ಬರುತ್ತೇವೆ.

ಅಧ್ಯಕ್ಷರು :– ಮಾನ್ಯ ಸುಭಾಷ್ ಗುತ್ತೇದಾರ್‌ರವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮೊದಲು ಅವರು ಮಾತನಾಡಲಿ. ಅವರು ಒಳಗಡೆ ಬಂದಾಗ ಹೊರಗಡೆಗೆ ನಾವು ಕರೆದಿದ್ದೇವೆ. ಅವರು ಮಾತನಾಡುವುದಕ್ಕೆ ಬಿಡಿ.

(ಈ ಹಂತದಲ್ಲಿ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ರಹೀಮ್ ಖಾನ್, ಶ್ರೀ ಈಶ್ವರ ಭೀಮಣ್ಣ ಖಂಡ್ರೆ, ಶ್ರೀ ರಾಜಶೇಖರ್ ಬಸವರಾಜ್ ಪಾಟೀಲ್‌ರವರು ಸದನದ ಬಾವಿಯಿಂದ ತಮ್ಮಗಳ ಸ್ಥಾನಕ್ಕೆ ಹೋದರು)

ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್ :– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಈ ಸಾರಿ ಭೀಕರ ಬರಗಾಲ ಬಂದಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆ ಅತ್ಯಂತ ಮುಖ್ಯವಾದ ಬೆಳೆಯಾಗಿದೆ. ಈ ವರ್ಷ ನಮ್ಮ ತಾಲ್ಲೂಕಿನಲ್ಲಿ ಗೊಡ್ಡು ರೋಗ ಬಂದು ಅರ್ಧ ಹಾಳಾಗಿ ಹೋಗಿದೆ. ಇದರಿಂದ ಹೆಚ್ಚಿನ ಇಳುವರಿ ಬಂದಿಲ್ಲ. ಆದರೆ, ಬೆಳೆದಿರುವಂಥ ತೊಗರಿ ಬೆಳೆಗೆ ಬೆಂಬಲ ಬೆಲೆ ಕೊಡಬೇಕೆಂದು ಕೇಳಿದಾಗ ಸರ್ಕಾರ ಖರೀದಿಯನ್ನು ಪ್ರಾರಂಭ ಮಾಡಿತ್ತು. ಸರ್ಕಾರ ಖರೀದಿ ಮಾಡುತ್ತದೆಂದು ರೈತರು ಸಾವಿರಾರು ಕ್ವಿಂಟಲ್ ಚೀಲಗಳನ್ನು ಎಪಿಎಂಸಿ ಕಛೇರಿಯ ಹತ್ತಿರ ಹಾಕಿಕೊಂಡು ಎಷ್ಟೋ ದಿವಸಗಳಿಂದ ರಾತ್ರಿ ಹಗಲು ನಿದ್ದೆಗೆಟ್ಟು ನಾಯಿ, ಹಂದಿಗಳನ್ನು ಕಾಯುತ್ತಾ ಕುಳಿತ್ತಿದ್ದಾರೆ. ಆದರೆ, ಸರ್ಕಾರ ಒಮ್ಮಿಂದೊಮ್ಮೆಲೆ ಖರೀದಿಯನ್ನು ಬಂದ್ ಮಾಡಿದೆ. ತೊಗರಿ ಖರೀದಿ

ಮಾಡುವುದನ್ನು ಬಂದ್ ಮಾಡಿದ್ದಾರೆ, ಇದರ ಬಗ್ಗೆ ತಾವೇನು ಹೇಳುತ್ತೀರೆಂದು ಮಾನ್ಯ ಮಂತ್ರಿಗಳ ಜೊಗೆ ದೂರವಾಣಿಯಲ್ಲಿ ಮಾತನಾಡಿದ್ದೇವೆ. ಖರೀದಿ ಮಾಡಿ ಇಟ್ಟುಕೊಳ್ಳುವುದಕ್ಕೆ ನಮ್ಮ ಹತ್ತಿರ ಗೋಡೌನ್ ಇಲ್ಲ ಮತ್ತೆ ಬೇರೆ ಕಡೆ ಜಾಗ ಕೂಡ ಇಲ್ಲದೆ ಇರುವುದರಿಂದ ನಾವು ಖರೀದಿ ಮಾಡುವುದಿಲ್ಲವೆಂದು ಹಾಗೂ ವ್ಯಾಪಾರಸ್ಥರೂ ಸಹ ಏನನ್ನು ಹೇಳುತ್ತಿಲ್ಲ ಆದ್ದರಿಂದ, ನಾವು ಖರೀದಿ ಮಾಡುವುದಿಲ್ಲವೆಂದು ಅವರು ಖಡಾಖಂಡಿತವಾಗಿ ಹೇಳಿದರು. ಎಪಿಎಂಸಿ ಕಛೇರಿ ಹತ್ತಿರ ರೈತರು ತಂದಿಟ್ಟುಕೊಂಡಿದ್ದ ತೊಗರಿ ಬೇಳೆಯನ್ನು ಮಧ್ಯವರ್ತಿ ವ್ಯಾಪಾರಸ್ಥರಿಗೆ ಅಗ್ಗದ ದರದಲ್ಲಿ ಕೊಟ್ಟು ಹೋದರು. ಉದರಿ ಕೊಟ್ಟು ಒಂದು ತಿಂಗಳ ನಂತರ ದುಡ್ಡು ಕೊಡುವಿರಂತೆ ಎಂದು ಹೇಳಿ ಕೊಟ್ಟು ಹೋಗಿದ್ದಾರೆ. ಇನ್ನೂ ಬಹಳಷ್ಟು ತೊಗರಿ ಅಲ್ಲಿದೆ. ಅದಕ್ಕಾಗಿ ಆ ತೊಗರಿಯನ್ನು ಇವತ್ತು ತಾವು ಖರೀದಿ ಮಾಡಬೇಕು. ಖರೀದಿ ಮಾಡಲಿಲ್ಲವೆಂದರೆ ರೈತರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಇದೊಂದೇ ಬೆಳೆ ನಮಗಿರುವುದು. ಉದ್ದು ಹೋಗಿದೆ, ಹೆಸರುಕಾಳು ಹೋಗಿದೆ, ಎಳ್ಳು ಹೋಗಿದೆ, ಹೀಗೆ ಎಲ್ಲಾ ಬೆಳೆಗಳು ಹೋಗಿದೆ. ಸ್ವಲ್ಪವೇ ಸ್ವಲ್ಪ ತೊಗರಿ ಬೆಳೆದದ್ದು ಉಳಿದುಕೊಂಡಿದೆ. ಇವತ್ತು ಅದನ್ನು ಖರೀದಿ ಮಾಡಲಿಲ್ಲವೆಂದರೆ ಹೇಗೆ? ಬೇರೆ ಬೆಳೆಗಳಾದ ಈರುಳ್ಳಿ, ಟೊಮ್ಯಾಟೋ ಮತ್ತು ಇನ್ನಿತರವುಗಳಿಗೆ ಬೆಂಬಲ ಬೆಲೆ ನಿಗದಿ ಮಾಡಿ ಸರ್ಕಾರದವರಾದ ತಾವು ಖರೀದಿ ಮಾಡುತ್ತೀರಿ. ಇವತ್ತು ನಮ್ಮ ಕಡೆ ತೊಗರಿಯೊಂದೇ ಬೆಳೆ ಬೆಳೆಯುವುದು. ಅದಕ್ಕಾಗಿ ಸರ್ಕಾರ ಅದನ್ನು ಖರೀದಿ ಮಾಡಬೇಕು. ನಮ್ಮ ಸರ್ಕಾರ ರೈತರ ಸರ್ಕಾರವೆಂದು ತಾವು ಹೇಳುತ್ತೀರಿ. ಹೊಸ ಮುಖ್ಯಮಂತ್ರಿಗಳಾದ ಮಾನ್ಯ ಸದಾನಂದಗೌಡರು ರೈತರಿಂದ ಶಹಭಾಸ್‌ಗಿರಿಯನ್ನು ತೆಗೆದುಕೊಳ್ಳಬೇಕೆಂದಿದ್ದರೆ, ರೈತರ ಮನಸ್ಸಿನಲ್ಲಿ ಸದಾನಂದಗೌಡರು ಇರಬೇಕೆಂದರೆ ತೊಗರಿ ಖರೀದಿ ಮಾಡಬೇಕೆಂದು ಸಂದರ್ಭದಲ್ಲಿ ಕಳಕಳಿಯ ವಿನಂತಿಯನ್ನು ತಮಗೆ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಈ ತೊಗರಿ ಬೆಳೆ ವಿಚಾರದಲ್ಲಿ,

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಸನ್ಮಾನ್ಯ ಅಧ್ಯಕ್ಷರೆ, ಮೊದಲು ಸಚಿವರು ನಾವು ಕೇಳಿರುವುದಕ್ಕೆ ಕ್ಲಾರಿಫಿಕೇಶನ್ ಕೊಡಲಿ. ಆನಂತರ ರೇವಣ್ಣನವರು ಮಾತನಾಡಲಿ.

ಶ್ರೀ ಹೆಚ್.ಡಿ. ರೇವಣ್ಣ :- ನಮ್ಮ ಕಡೆಯಲ್ಲಿರುವ ಆ ಭಾಗದ ಶಾಸಕರೂ ಕೂಡ ಮಾತನಾಡಿದ್ದಾರೆ. ನಾನೂ ಕೂಡ ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಿದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು

ಮಾತನಾಡಿದಾಗ ನಾವು ಆಗಲೇ ಕೇಳಿದೆವು. ಆಗ ತಾವು ಗಮನ ಸೆಳೆಯುವ ಸೂಚನೆ ಬಂದಾಗ ಅದರಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ತಾವು ಹೇಳಿದಿರಿ.

ಅಧ್ಯಕ್ಷರು :– ಮಾನ್ಯ ಸಚಿವರು ಮೊದಲು ಕ್ಲಾರಿಫಿಕೇಶನ್ ಕೊಡಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ನಾನು ಕೂಡ ಅದನ್ನೇ ಹೇಳುತ್ತಿರುವುದು. ಮೊದಲು ಸಚಿವರು ಕ್ಲಾರಿಫಿಕೇಶನ್ ಕೊಡಲೆಂದು.

ಶ್ರೀ ಹೆಚ್.ಡಿ. ರೇವಣ್ಣ :– ಸ್ವಲ್ಪ ತಡೆಯಿರಿ. ನಾವೂ ಕೂಡ ನಿಮ್ಮ ಪರವಾಗಿಯೇ ಮಾತನಾಡುತ್ತೇವೆ. ನಾನೇನು ನಿಮ್ಮ ವಿರುದ್ಧವಾಗಿ ಮಾತನಾಡುವುದಿಲ್ಲ. ನಮ್ಮದನ್ನೂ ಕೇಳಿಕೊಂಡು ಮಾನ್ಯ ಸಚಿವರು ಒಟ್ಟಿಗೆ ಉತ್ತರ ಕೊಡಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮೊದಲು ಸಚಿವರು ಕ್ಲಾರಿಫಿಕೇಶನ್ ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಮುಖ್ಯಮಂತ್ರಿಗಳೇ, ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾಂಗ್ರೆಸ್‌ಗೆ ಬೇರೆ ಕ್ಲಾರಿಫಿಕೇಶನ್, ಜೆ.ಡಿ(ಎಸ್) ಗೆ ಬೇರೆ ಕ್ಲಾರಿಫಿಕೇಶನ್ ಕೊಡುವುದಾದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವಷ್ಟೇ ಸ್ವಾಮಿ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಕೃಷಿ ಸಚಿವರಲ್ಲಿ ಗಂಭೀರವಾಗಿ ಒತ್ತಾಯ ಮಾಡುವುದೇನೆಂದರೆ, ಮಾರುಕಟ್ಟೆಯಲ್ಲಿ ನೂರಕ್ಕೆ ನೂರರಷ್ಟು ತೆಗೆದುಕೊಳ್ಳಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸ್ಥಳೀಯ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ 3.500/– ರೂಪಾಯಿ ರೇಟ್ ಇದೆ. ಸರ್ಕಾರದ ಬೆಂಬಲ ಬೆಲೆ ರೂ. 4.000/– ಇದೆ. ಈಗ ನಾವು ಕೇಂದ್ರ ಸರ್ಕಾರದ ಮೇಲೂ ಕೂಡ ಮುಂಚೆಯೇ ಒತ್ತಾಯ ಮಾಡಬೇಕಾಗುತ್ತದೆ. ಏನು ಆ ಒತ್ತಾಯವೆಂದರೆ, ಕೇಂದ್ರ ಸರ್ಕಾರ ಹೊರ ರಾಷ್ಟ್ರಗಳಿಂದ ತೊಗರಿಯನ್ನು import ಮಾಡುತ್ತಿದ್ದಾರೆ. ಪ್ರತಿ ಕ್ವಿಂಟಾಲ್‌ಗೆ 2,500/– ರೂ. ನಂತೆ ಒಂದು ವರ್ಷಕ್ಕೆ ಆಗುವಷ್ಟು ತೊಗರಿಯನ್ನು ತರಿಸಿದ್ದಾರೆ. ಬರ್ಮಾ ಮತ್ತು ಇತರ ಹೊರದೇಶಗಳಿಂದ. ಆದುದರಿಂದ ಮೊದಲು ಆ ರೀತಿ import ಮಾಡುತ್ತಿರುವುದನ್ನು ನಿಲ್ಲಿಸಬೇಕು. ಆ ಖರೀದಿ ನಿಲ್ಲಿಸಿ ನಮ್ಮ ಭಾಗದ ರೈತರಿಂದ ತೊಗರಿ ಖರೀದಿ ಮಾಡಬೇಕು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ದಯವಿಟ್ಟು ವಿಷಯಾಂತರವಾಗುವುದು ಬೇಡ. ಮೊದಲು ಸಚಿವರು ಕ್ಲಾರಿಫಿಕೇಶನ್ ಕೊಡಲಿ. ರೇವಣ್ಣನವರೆ, ಆಮೇಲೆ ನೀವು ಇದನ್ನು ಕೇಳಿ. ಮಾನ್ಯ ಅಧ್ಯಕ್ಷರೆ, you go as per procedure. ನಾವು ಇದನ್ನು ಒಪ್ಪುವುದಿಲ್ಲ. ಮೊದಲು

ಸಚಿವರು ಉತ್ತರ ಕೊಡಲಿ. ಮಾನ್ಯ ಅಧ್ಯಕ್ಷರೆ, ತಾವು ಪ್ರೊಸೀಜರ್ ಪ್ರಕಾರ ಮೊದಲು ಸಚಿವರಿಗೆ ಕ್ಲಾರಿಫಿಕೇಶನ್ ಕೊಡಲು ಹೇಳಿ. ಆಮೇಲೆ ತಾವು ಬೇರೆಯವರಿಗೆ ಕ್ಲಾರಿಫಿಕೇಶನ್ ಕೇಳಲು ಅವಕಾಶ ಕೊಡಿ.

ಅಧ್ಯಕ್ಷರು :– ಮಾನ್ಯ ಕೃಷಿ ಸಚಿವರೆ, ತಾವು ಉತ್ತರ ಹೇಳಿ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ,....

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು,.....

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ನಾನು allow ಮಾಡುವುದಿಲ್ಲ. It is my right. I have a right to seek answer from the Minister. No, you have to protect my right.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮೊದಲು ಕೇಂದ್ರದವರು ತೊಗರಿಯನ್ನು import ಮಾಡುತ್ತಿರುವುದನ್ನು ನೀವು ನಿಲ್ಲಿಸುವುದಕ್ಕೆ ಹೇಳಿ. ನೀವು ಅಲೋ ಮಾಡುವುದಿಲ್ಲವೆಂದರೆ ಹೇಗೆ? ನಾವು ಸದನದ ಬಾವಿಗೆ ಧರಣಿಗೆ ಬರುತ್ತೇವೆ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಹೆಚ್.ಡಿ. ರೇವಣ್ಣನವರು, ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು, ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್‌ರವರು ಸದನದ ಬಾವಿಗೆ ಬಂದರು)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಖಾಶೆಂಪೂರ್‌ರವರೆ, ತಾವು ಈ ರೀತಿ ಮಾತನಾಡಬೇಡಿ. ಮಾನ್ಯ ರೇವಣ್ಣನವರು ಏನು ಹೇಳಿದರೋ ಅದನ್ನು ನಾವು ಕೇಳಿಸಿಕೊಂಡಿದ್ದೇವೆ. ಸುಮ್ಮನೆ ನೀವು ಎಲ್ಲದರಲ್ಲಿಯೂ ರಾಜಕೀಯ ಮಾಡುತ್ತೀರಷ್ಟೆ. ನಾವು ರೈತರ ಪರವಾಗಿಯೇ ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಕ್ಲಾರಿಫಿಕೇಶನ್ ಕೊಡಬೇಕೆಂದು ಒತ್ತಾಯಿಸುತ್ತೇನೆ. Let him clarify.

ಶ್ರೀ ಸಿದ್ದರಾಮಯ್ಯ :– ನಮ್ಮವರು ಬಾವಿಗೆ ಬಂದಾಗ ವಾಪಸ್ ಕಳುಹಿಸಿದ್ದೇನೆ. ಈಗ ನೀವು ಹೀಗೆ ಸದನದ ಬಾವಿಗೆ ಬಂದರೆ ಹೇಗೆ? ತಾವು ಹೋಗಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಹೆಚ್.ಡಿ. ರೇವಣ್ಣನವರು, ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು, ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್‌ರವರು ಸದನದ ಬಾವಿಯಿಂದ ನಿರ್ಗಮಿಸಿ ತಮ್ಮ ಸ್ಥಾನಕ್ಕೆ ಹೋದರು)

(ಗೊಂದಲ)

ಅಧ್ಯಕ್ಷರು :– ನೀವು ನೀವುಗಳೇ ಏಕೆ ಈ ರೀತಿ ಮಾತನಾಡುತ್ತೀರಿ?

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ಸಮಸ್ಯೆ ಬೀದರ್, ಗುಲ್ಬರ್ಗಾ, ರಾಯಚೂರು, ಹೀಗೆ ಇಲ್ಲೆಲ್ಲಾ ಕಡೆ ಈ ಸಮಸ್ಯೆಯಿದೆ. ನಾವೇನೂ ಬೇರೆ ರೀತಿ ಮಾತನಾಡಿ ವಿಷಯಾಂತರವನ್ನೇನೂ ಮಾಡುವುದಿಲ್ಲ. ಆದರೆ ಅವರು ಹೇಳಿದ ಪ್ರಕಾರ ಇವತ್ತು ಎಲ್ಲಾ ಖರೀದಿ ಕೇಂದ್ರಗಳಿಗೆ ಈಗಾಗಲೇ ರೈತರು ತೊಗರಿಯನ್ನು ತಂದಿಟ್ಟಿದ್ದಾರೆ. ಮೂಟೆಗಳಲ್ಲಿ ಕಟ್ಟಿ ಇಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ, ಇಡೀ ಮೂರು ಜಿಲ್ಲೆಗಳಿಗೆ ಸೇರಿದಂತೆ ಕೃಷಿ ಸಚಿವರು ತೊಗರಿ ಖರೀದಿಗೆ ಕೇವಲ 12 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಭಾಗಗಳಲ್ಲಿ ರೈತರಿಗೆ cash crop ಎಂದು ಇದ್ದರೆ ಕೇವಲ ತೊಗರಿ ಮಾತ್ರ. ಬೇರೆ ಯಾವ ಬೆಳೆಯೂ ಇಲ್ಲ. ಹೀಗಾಗಿ immediate market intervention ಗೆ ಹೋಗಿ ಈಗಾಗಲೇ APMC yard ನಲ್ಲಿರುವ ತೊಗರಿಯನ್ನು ಖರೀದಿ ಮಾಡಲೇಬೇಕು. ಹೊಲದಲ್ಲಿರುವ ತೊಗರಿ ಬಗ್ಗೆ ನಾನು ಹೇಳುತ್ತಿಲ್ಲ. ಈಗಾಗಲೇ ತೊಗರಿಯನ್ನು ಮಾರ್ಕೆಟ್‌ನಲ್ಲಿ ಮೂಟೆಗಳಲ್ಲಿ ರೈತರು ತಂದಿಟ್ಟಿದ್ದಾರೆ. ಇದರಲ್ಲಿ ಯಾರದೂ ಪರ್ಸನಲ್ ಸಮಸ್ಯೆಯಲ್ಲ. ಇದು ಇಡೀ ನಮ್ಮ ಭಾಗದಲ್ಲಿರುವವರ ಸಮಸ್ಯೆಯಾಗಿದೆ. ಅದಕ್ಕಾಗಿ ನಮಗೆ ಬೇರೆ ಉತ್ತರವೇ ಬೇಕಾಗಿಲ್ಲ. ತಕ್ಷಣವೇ ಖರೀದಿ ಶುರು ಮಾಡಬೇಕು. ಖರೀದಿಗೂ ಕೂಡ ಲಿಮಿಟ್ ಇಡಬಾರದು. ಮಾನ್ಯ ಕುಮಾರಸ್ವಾಮಿಯವರು ಸಿ.ಎಂ. ಇದ್ದಾಗ 82 ಕೋಟಿ ರೂ.ಗಳಲ್ಲಿ ಈರುಳ್ಳಿ ಖರೀದಿ ಮಾಡಿದ್ದರು. ನೀವು ಕೇವಲ 12 ಕೋಟಿ ರೂ.ಗಳಷ್ಟು ತೊಗರಿ ಖರೀದಿ ಮಾಡಿದ್ದೀರಿ. ಆಗಲಿ ಒಂದು ನೂರು ಕೋಟಿ ರೂ.ಗಳ ಖರೀದಿಯಾಗಲಿ. ಇದು perishable ಪದಾರ್ಥವೂ ಅಲ್ಲ. ಈಗ ಸರ್ಕಾರಕ್ಕೂ ಕೂಡ ಲಾಸ್ ಆಗುವುದು ಕೇವಲ 700/– ರೂಪಾಯಿಯಷ್ಟೇ. ಇವರು ಕೃಷಿ ಬಜೆಟ್ ಇಟ್ಟು ಒಂದು ಸಾವಿರ ಕೋಟಿ ರೂ.ಗಳ ಆವರ್ತ ನಿಧಿ ಎಂದು ಹೇಳುತ್ತಾರೆ. ಈ ಆವರ್ತ ನಿಧಿ ಎಲ್ಲಿಗೆ ಹೋಗುತ್ತಿದೆ? ಅದಕ್ಕಾಗಿ ನಾನು ಈಗ ಹೇಳುವುದೇನೆಂದರೆ ಮೊದಲು ಖರೀದಿ ಶುರು ಮಾಡಬೇಕು ಮತ್ತು ಇದಕ್ಕೆ ಲಿಮಿಟ್ ಇಡಬಾರದು. ರೈತರು ಎಷ್ಟು ತೊಗರಿ ತರುತ್ತಾರೋ ಅಷ್ಟನ್ನು ಖರೀದಿ ಮಾಡಲಿ ಸಾಕು.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು :– ಈಗ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿರುವಾಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡದೆ ನೀವು ನೀವುಗಳೇ ಎದ್ದು ನಿಂತು ಮಾತನಾಡಿದರೆ ಹೇಗೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಕೃಷಿ ಸಚಿವರೆ, ಆ ಭಾಗದ ರೈತರಿಗೆ ತೊಗರಿ ಬೆಳೆಯೇ main cash crop ಇರುವುದು. ಗುಲ್ಬರ್ಗಾ, ರಾಯಚೂರು, ಬೀದರ್ ಮತ್ತು ಯಾದಗೀರ್ ಭಾಗಗಳಲ್ಲಿ ತೊಗರಿ ಬೆಳೆಯೊಂದೇ main crop and that is the only cash crop ಆಗಿರುವುದು. ಈಗ ಅಲ್ಲಿ ಬೆಲೆ ಬಿದ್ದುಹೋಗಿದೆ. ನೀವು ಖರೀದಿ ವಿಚಾರದಲ್ಲಿ market intervention ಪ್ರಾರಂಭ ಮಾಡಿದಿರಿ. ಈಗಾಗಲೇ ಸುಮಾರು 11.5 ಕೋಟಿ ರೂ.ಗಳಷ್ಟು ತೊಗರಿ ಖರೀದಿ ಮಾಡಿದ್ದೀರಿ. ಇನ್ನೂ ತೊಗರಿ ರೈತರ ಹತ್ತಿರವಿದೆ. ನೀವು ಖರೀದಿ ನಿಲ್ಲಿಸಿರುವುದಕ್ಕೆ ಕಾರಣವೇನು ಕೊಟ್ಟಿದ್ದೀರೆಂದರೆ ಮೊದಲನೆಯದಾಗಿ ಬೆಲೆ ಮೇಲಕ್ಕೇ ಹೋಗಲಿಲ್ಲ, ನಾವು market intervention ಮಾಡಿದ್ದರಿಂದಲೂ ರೈತರಿಗೆ ಅನುಕೂಲವಾಗಲಿಲ್ಲವೆಂದಿದ್ದೀರಿ. ಈಗ ಪ್ರತಿ ಕ್ವಿಂಟಾಲ್‌ಗ 4,000/– ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಿದ್ದೀರಿ. ಆದರೂ ಬೆಲೆ ಮೇಲಕ್ಕೆ ಹೋಗಲಿಲ್ಲ. ಇದು ಕೂಡ ಒಂದು ಕಾರಣ ಖರೀದಿ ನಿಲ್ಲುಸುವುದಕ್ಕೆ ಎಂದು ಹೇಳಿದ್ದೀರಿ. ಇನ್ನು ಎರಡನೆಯದಾಗಿ ಮೊದಲು ರೈತರಿಂದ ದಳ್ಳಾಳಿಗಳು ಕಡಿಮೆ ಬೆಲೆಗೆ ತೊಗರಿ ತೆಗೆದುಕೊಂಡು ಈಗ ಅದನ್ನೇ ಮಾರುಕಟ್ಟೆಗೆ ತಂದು ರೈತರ ಹೆಸರಿನಲ್ಲಿ ಬೆಂಬಲ ಬೆಲೆ ದರದಲ್ಲಿ ಖರೀದಿ ಮಾಡಲು ತರುತ್ತಿದ್ದಾರೆ ಎನ್ನುವ ಕಾರಣವನ್ನು ಕೊಟ್ಟಿದ್ದೀರಿ. ಆ ರೀತಿ ಇದ್ದರೆ ಇದನ್ನು control ಮಾಡಲು ನಿಮ್ಮ ಅಧಿಕಾರಿಗಳನ್ನು ಹಾಕಿ. ಈ ರೀತಿ ದಳ್ಳಾಳಿಗಳು ಕಡಿಮೆ ಬೆಲೆಯಲ್ಲಿ ಮೊದಲು ತೆಗೆದುಕೊಂಡು ನಂತರ ರೈತರ ಹೆಸರಿನಲ್ಲಿ ಮಾರ್ಕೆಟ್‌ನಲ್ಲಿ ತೊಗರಿ ಖರೀದಿ ಮಾಡಿ ಎಂದು ಬರುತ್ತಿದ್ದರೆ ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಿ. ಆದರೆ ಈ ಸದನದಲ್ಲಿ ಈ ಶಾಸಕರುಗಳೆಲ್ಲಾ ಏನು ಹೇಳುತ್ತಿದ್ದಾರೆಂದರೆ, ಈಗಾಗಲೇ ರೈತರು ತೊಗರಿಯನ್ನು ತೆಗೆದುಕೊಂಡು ಹೋಗಿ ಮಾರ್ಕೆಟ್‌ನಲ್ಲಿ ಹಾಕಿಬಿಟ್ಟಿದ್ದಾರೆ. ಈಗ ನೀವು ತೊಗರಿ ಖರೀದಿಯನ್ನು ನಿಲ್ಲಿಸಿಬಿಟ್ಟಿದ್ದೀರಿ. ಈಗ ಯಾರಾದರೂ ದಳ್ಳಾಳಿಗಳು ರೈತರ ಹೆಸರಿನಲ್ಲಿ ತೊಗರಿ ಖರೀದಿ ಮಾಡಿ ಎಂದು ಬಂದಿದ್ದರೆ ಅಂಥದ್ದನ್ನು ನಿಲ್ಲಿಸಿ. ಆದರೆ ತೊಗರಿ ಬೆಳೆದಿರುವ ರೈತರಿಗೆ ತೊಂದರೆಯಾಗಬಾರದು. ಮತ್ತೆ ನೀವು

ತೊಗರಿಯನ್ನು ರೈತರಿಂದ ಕೊಂಡುಕೊಳ್ಳುವುದನ್ನು ಮುಂದುವರೆಸಿ. ಈಗ ಅಲ್ಲಿ ಕೇವಲ 11 ಕೋಟಿ ರೂ.ಗಳಷ್ಟು ಮಾತ್ರ ತೊಗರಿಯನ್ನು ಬೆಳೆದಿಲ್ಲ. ಹಲವಾರು ಕೋಟ್ಯಂತರ ರೂ.ಗಳ ತೊಗರಿಯನ್ನು ಬೆಳೆದಿದ್ದಾರೆ. ಇದನ್ನು ಬೆಳೆದಿರುವ ಎಲ್ಲ ರೈತರಿಗೂ ಇದರಿಂದ ಅನುಕೂಲವಾಗಬೇಕು. ಕೇವಲ 5 ಸಾವಿರದಿಂದ 10 ಸಾವಿರ ರೈತರಿಗೆ ಮಾತ್ರ ಅನುಕೂಲವಾಗಿದೆಯೆಂದು ಹೇಳುವುದಲ್ಲ. ಆ ಮೂರ್ನಾಲ್ಕು ಜಿಲ್ಲೆಗಳಲ್ಲಿರುವ ಬಹಳಷ್ಟು ರೈತರುಗಳು ತೊಗರಿಯನ್ನು ಬೆಳೆದಿದ್ದಾರೆ. ಏಕೆಂದರೆ ಅದೊಂದೇ ಅವರಿಗೆ main cash crop ಇರುವುದು. ನೀವು ಅದನ್ನೂ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ? ನೀವು ಒಂದು ಕಡೆ ಕೃಷಿ ಬಜೆಟ್ ಎಂದು ಮಂಡಿಸುತ್ತೀರಿ. ಇನ್ನೊಂದು ಕಡೆ ತೊಗರಿ ಖರೀದಿ ಮಾಡುವುದಿಲ್ಲವೆಂದು ಹೇಳುತ್ತೀರಿ. ಇವು ಒಂದಕ್ಕೊಂದು ಸಾಮ್ಯ ಇರುವುದಿಲ್ಲ. contradictions ಆಗುತ್ತದೆ. ರೈತರಿಗೆ ಸಹಾಯ ಮಾಡಬೇಕು ಎಂದು ನಿಮ್ಮ ಮನಸ್ಸಿಗೆ ಬರಲೇಬೇಕು. ಈ ಕೂಡಲೇ ಖರೀದಿಯನ್ನು ಪ್ರಾರಂಭ ಮಾಡಿ ಬೆಲೆ stabilize ಆಗುವವರೆಗೂ ಕೂಡ ತೊಗರಿ ಖರೀದಿ ಮಾಡಿ. ಮುಂದೆ ಮುಂಗಾರು ಬಂದಮೇಲೆ ನೀವು ಖರೀದಿಯನ್ನು ಬೇಕಾದರೆ ನಿಲ್ಲಿಸಿ. ನೀವು ಹೋದ ವರ್ಷ market intervention ಗಾಗಿ ರೂ. 1 ಸಾವಿರ ಕೋಟಿ ಇಟ್ಟಿದ್ದೇವೆಂದು ಹೇಳಿದ್ದಿರಿ. ಈಗ ಮತ್ತೆ ಬಜೆಟ್‌ನಲ್ಲಿ ರೂ. 1 ಸಾವಿರ ಕೋಟಿ ಘೋಷಣೆ ಮಾಡಿದ್ದೀರಿ. ಹೀಗಿರುವಾಗ ನಾವು 11.5 ಕೋಟಿ ಖರೀದಿ ಮಾಡಿದ್ದೇವೆಂದು ಹೇಳಿ ಈಗ ನಿಲ್ಲಿಸಿಬಿಟ್ಟಿದ್ದೇವೆಂದರೆ ಹೇಗಾಗುತ್ತದೆ. ಅದು 50 ಕೋಟಿಯಾಗಲಿ, 70 ಕೋಟಿಯಾಗಲಿ, 100 ಕೋಟಿಯಾಗಲಿ ತೊಗರಿ ಖರೀದಿ ಮಾಡಿ ರೈತರಿಗೆ ಸಹಾಯ ಮಾಡಿ. ಈ ವಿಚಾರದಲ್ಲಿ ದಯವಿಟ್ಟು ನೀವು ಸ್ವಲ್ಪ ಉದಾರ ಮನಸ್ಸಿನಿಂದ ನೋಡಬೇಕೇ ಹೊರತು ಅಲ್ಲಿ ದಳ್ಳಾಳಿಗಳು ರೈತರಿಗೆ ಮೋಸ ಮಾಡಿಬಿಡುತ್ತಾರೆ ಎನ್ನುವ ಒಂದೇ ಕಾರಣ ಕೊಟ್ಟುಬಿಟ್ಟು ಖರೀದಿ ನಿಲ್ಲಿಸುವುದಕ್ಕೆ ಹೋಗಬೇಡಿ. ಮಾನ್ಯ ಮುಖ್ಯಮಂತ್ರಿಗಳು ತಾವು ಹೇಳಬೇಕು. ಅಲ್ಲಿ Upper Houseನಲ್ಲಿ ಹೇಳಿದ್ದೀರಿ, ಇಲ್ಲಿ ಹೇಳುವುದು ಬೇಡವೆಂದರೆ ಹೇಗೆ? ನೀವು ಉತ್ತರ ನೋಡಿದಿರಾ? ಉತ್ತರ ಈ ರೀತಿ ಕೊಟ್ಟರೆ ಹೇಗೆ ಆಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :– ನೀವು ಉತ್ತರ ಕೇಳಿಸಿಕೊಳ್ಳಿ, ಆಮೇಲೆ ಹೇಳಿ.

ಶ್ರೀ ಸಿದ್ದರಾಮಯ್ಯ :– ಈಗ ತಾವು ಸ್ವಲ್ಪ ಧಾರಾಳವಾಗಿದ್ದೀರೋ ಇಲ್ಲವೋ?

ಶ್ರೀ ಉಮೇಶ್ ವಿ. ಕತ್ತಿ :- ನಾನು ತಮ್ಮ ಸಹಾಯಕ್ಕೆ ಬರುತ್ತೇನೆ. ತಮ್ಮ ಸಹಾಯ ಪಡೆದು ಧಾರಾಳವಾದ ಮನಸ್ಸಿನಿಂದ ಖರೀದಿ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ, ಬೀದರ್ ಆ ಭಾಗದಲ್ಲಿ ಬೆಳೆಯುವಂತಹ ತೊಗರಿ ಬೇಳೆ ಬಹಳ ಪ್ರಾಮುಖ್ಯವಾದಂತಹ ಬೆಳೆ. ಆ ಭಾಗದ ಜನರ ವಾಣಿಜ್ಯ ಬೆಳೆಯೂ ಹೌದು. ಇದರಲ್ಲಿ ಎರಡು ಭಿನ್ನಾಭಿಪ್ರಾಯವಿಲ್ಲ. ಅದರ ಬಗ್ಗೆ ಚರ್ಚೆ ಮಾಡುವಂತಹ ಪ್ರಸಂಗ ಬೇಡ. ಪ್ರತಿ ವರ್ಷದಂತೆ ಈ ವರ್ಷ ಆರು ಹೆಕ್ಟೇರ್ ಜಮೀನಿನಲ್ಲಿ ತೊಗರಿ ಬೆಳೆಯನ್ನು ಬೆಳೆದಿದ್ದಾರೆ. ಅದರ ಜೊತೆಗೆ ಕೆಲವು ರೋಗಗಳಿಂದ, ಬರಗಾಲದ ಛಾಯೆಯಿಂದ ರೈತರಿಗೆ 50% yield ಬಂದು, ನನ್ನ ಲೆಕ್ಕದ ಪ್ರಕಾರ 20 ಲಕ್ಷ ಟನ್‌ನಷ್ಟು ತೊಗರಿ ಬೆಳೆ ಬೆಳೆಯಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬೆಳೆದಂತಹ ಬೆಳೆಗಳನ್ನು ಹೋಲಿಸಿ ನೋಡಿದಾಗ 50% ನಷ್ಟು ಬೆಳೆ ರೈತರ ಕೈಯಿಗೆ ಬಂದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ 3-4 ವರ್ಷಗಳಿಂದ ಈ ರಾಜ್ಯದಲ್ಲಿ ರೈತರು ಬೆಳೆಯುವಂತಹ ಬೆಳೆಗಳಿಗೆ ಕೂಡಲೇ ಬೆಂಬಲ ಬೆಲೆಯನ್ನು ಘೋಷಣೆ ಮಾಡುವುದರ ಜೊತೆಗೆ, Market Intervention ಮಾಡಿದಂತಹ ಸರ್ಕಾರ ಯಾವುದಾದರೂ ಇದ್ದರೆ ಅದು ನಮ್ಮ ಸರ್ಕಾರ ಎಂದು ಎದೆ ತಟ್ಟಿ ಹೇಳುವಂತಹ ಕೆಲಸವನ್ನು ಮಾಡಿದ್ದು, ರಾಜ್ಯಾದ್ಯಂತ ರೈತರು ಬೆಳೆದಂತಹ ಬೆಳೆಗೆ ಬೆಂಬಲ ಬೆಲೆ ಘೋಷಣೆ ಮಾಡಿದಂತಹ ಕಾರ್ಯಕ್ರಮವನ್ನು ಪ್ರತಿವರ್ಷ ನಡೆಸಿಕೊಂಡು ಬಂದಿರುವುದು ನಮ್ಮ ಸರ್ಕಾರ ಎಂದು ಹೇಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ :- Market Intervention scheme introduce ನಾನೇ ಮಾಡಿದವನು. ನೀವು ಬೆನ್ನು ತಟ್ಟಿಕೊಳ್ಳುವ ಹಾಗಿದ್ದರೆ ತಟ್ಟಿಕೊಳ್ಳಿ. ಆದರೆ ರೈತರಿಗೆ ಸಹಾಯ ಮಾಡಿ.

ಶ್ರೀ ಉಮೇಶ್ ವಿ. ಕತ್ತಿ :- ಆದರೆ ಇವತ್ತು ತೊಗರಿಬೇಳೆ ಖರೀದಿ ಮಾಡಬೇಕೆಂದು ಆ ಭಾಗದ ರೈತರು ಮತ್ತು ಅಲ್ಲಿನ ಜನ ಪ್ರತಿನಿಧಿಗಳ ಒತ್ತಾಯದ ಮೇರೆಗೆ ದಿನಾಂಕ : 15.02.2012 ರಂದು ಖರೀದಿಯನ್ನು ಪ್ರಾರಂಭ ಮಾಡಿದೆವು. ಒಂದು ತಿಂಗಳ ಕಾಲ ಸತತವಾಗಿ ಯಾವುದೇ ತೊಂದರೆಯಿಲ್ಲದೆ 16 ಕೇಂದ್ರಗಳನ್ನು ತೆರೆದು ತೊಗರಿ ಬೇಳೆ ಖರೀದಿಯನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರದ ನೀತಿಯಂತೆ 3,200 ರೂಪಾಯಿ ಬೆಂಬಲ ಬೆಲೆ, ಜನವರಿ ಮತ್ತು ಫೆಬ್ರವರಿಯಲ್ಲಿ ಖರೀದಿ ಮಾಡಿದರೆ 500 ರೂಪಾಯಿ incentive ಅದಲ್ಲದೆ ರಾಜ್ಯ ಸರ್ಕಾರ 300 ರೂಪಾಯಿ incentive ಘೋಷಣೆ ಮಾಡಿ 4,000 ರೂಪಾಯಿಯಂತೆ ಖರೀದಿ ಮಾಡಬೇಕೆಂದು ತೀರ್ಮಾನ

ಮಾಡಿ, ಖರೀದಿಗಳನ್ನು ಪ್ರಾರಂಭ ಮಾಡಿದ್ದು, ಕೇಂದ್ರ ಸರ್ಕಾರದ ಬೆಂಬಲ ಬೆಲೆಗಿಂತ ಕೆಳಗೆ ಹೋದಾಗ ಮಾತ್ರ incentive ಮತ್ತು ಬೆಂಬಲ ಬೆಲೆ ಕೊಡುವುದಕ್ಕೆ ಸಾಧ್ಯ. ಅದು ಯಾವುದೂ ಇಲ್ಲದಿದ್ದಂತಹ ಸಂದರ್ಭದಲ್ಲಿ ಸಹ ಇವತ್ತು ಈ ದೇಶದಲ್ಲಿ ಅಕ್ಕಪಕ್ಕದ ರಾಜ್ಯಗಳಲ್ಲಿ ಹೋಲಿಸಿ ನೋಡಿದಾಗ ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ ಆಗಿರಬಹುದು, ಇನ್ನೂ ಸಾಕಷ್ಟು ಪ್ರದೇಶಗಳಲ್ಲಿ ತೊಗರಿಬೆಳೆ ಬೆಳೆಯುತ್ತಾರೆ. ಈ ದೇಶದಲ್ಲಿ ಯಾವುದೇ ರಾಜ್ಯದ ಸರ್ಕಾರಗಳು ಈ ವರ್ಷದಲ್ಲಿ ತೊಗರಿಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಖರೀದಿ ಮಾಡಿರುವಂತಹ ಉದಾಹರಣೆ ಇಲ್ಲ. ಕರ್ನಾಟಕ ರಾಜ್ಯ ಮಾತ್ರ ತೊಗರಿ ಬೆಳೆದಂತಹ ರೈತರಿಗೆ ತೊಂದರೆಯಾಗಬಾರದು, ಅವರು ಸಹಾಯಕ್ಕೆ ಹೋಗಬೇಕೆಂದು ಖರೀದಿಯನ್ನು ಪ್ರಾರಂಭ ಮಾಡಿ ಒಂದು ತಿಂಗಳ ಕಾಲ 12 ಕೋಟಿ ರೂಪಾಯಿಯ 25 ಸಾವಿರ ಕ್ವಿಂಟಾಲ್‌ನಷ್ಟು ಖರೀದಿ ಮಾಡಿ procurement ಮಾಡುವಂತಹ ಕೆಲಸವನ್ನು ಮಾಡಿದೆ. ಒಂದು ಕಡೆ procurement ಮಾಡುವುದಾಗಲಿ, ಇನ್ನೊಂದು ಕಡೆ ಅದನ್ನು ಇಡುವಂತಹ ಗೋಡೌನಿನ ವ್ಯವಸ್ಥೆಗಳನ್ನು ಕೂಡ ನೋಡಿಕೊಳ್ಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ದಲ್ಲಾಳಿಗಳ ಮುಖೇನ ಇವತ್ತು ಖರೀದಿಗಳನ್ನು ಮಾಡುವ ವಿಚಾರ ಕಂಡುಬಂದಂತಹ ಸಂದರ್ಭದಲ್ಲಿ ಸ್ಥಗಿತಗೊಳಿಸುವಂತಹ ಪ್ರಯತ್ನವನ್ನು ಸರ್ಕಾರ ಚಿಂತನೆ ಮಾಡಿ ಮಾಡಿದೆ. ಇದೆಲ್ಲದರ ಜೊತೆಗೆ ಕಳೆದ ಐದು ವರ್ಷಗಳಿಂದ ಸತತವಾಗಿ ಕೇಂದ್ರ ಸರ್ಕಾರ ಈ ದೇಶಕ್ಕೆ ತೊಗರಿ ಬೇಳೆ ಏನು ಬೇಕಾಗುತ್ತದೋ, ಅದನ್ನು ಬರ್ಮಾ ಮತ್ತು ದಕ್ಷಿಣ ಆಫ್ರಿಕಾ ಇರಬಹುದು, ಅಲ್ಲಿ ಬೆಳೆಯುವಂತಹ ತೊಗರಿ ಬಹಳ ಚಿಕ್ಕದಾಗಿದ್ದು, effectನಲ್ಲಿ fit in ಆಗದಿರುವಂತಹ ತೊಗರಿಯನ್ನು ಅಲ್ಲಿಂದ import ಮಾಡಿಕೊಂಡು, ನಮ್ಮ ತೊಗರಿಯಲ್ಲಿ mix ಮಾಡುವಂತಹ ಪದ್ಧತಿಯನ್ನು ನಾವು ನೋಡುತ್ತಿದ್ದೇವೆ. ಅದು effectನಲ್ಲಿ fit in ಆಗುವುದಿಲ್ಲ, ನಮ್ಮ ತೊಗರಿಗೆ ಆ ತೊಗರಿಗೆ 50% difference ಇದೆ. ಆ ತೊಗರಿ 2,100 ರೂಪಾಯಿ ಕ್ವಿಂಟಾಲ್‌ನಂತೆ ಮದ್ರಾಸ್ ಪೋರ್ಟ್‌ಗೆ ಬಂದು dump ಆಗಿದೆ. ಅದನ್ನು ಕೂಡಲೇ ನಿಲ್ಲಿಸುವಂತಹ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳಬೇಕು. ಅದನ್ನು ನಿಲ್ಲಿಸಿದಲ್ಲಿ ರಾಜ್ಯ ಸರ್ಕಾರ ನಮ್ಮ ರೈತರಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದ ಹಾಗೆ ಚಿಂತನೆ ಮಾಡಿ ರೈತ ಎಷ್ಟೇ ಬೆಳೆ ಬೆಳೆದರೂ ಖರೀದಿ ಮಾಡುವುದಕ್ಕೆ ನಾವು ಸಿದ್ಧರಿದ್ದೀವಿ. ಅದರಲ್ಲಿ ಎರಡು ಭಿನ್ನಾಭಿಪ್ರಾಯ ಬೇಡ. ಆದರೆ ಒಂದು ಕಡೆ ತೊಗರಿಯನ್ನು ಆಮದು

ಮಾಡಿಕೊಂಡು ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಮಾಡುವುದು ಮತ್ತು ಇನ್ನೊಂದು ಕಡೆ ರಾಜ್ಯ ಸರ್ಕಾರ ಖರೀದಿ ಮಾಡಬೇಕೆನ್ನುವುದು ಯಾವ ನೀತಿ? ನಾನು ಕೂಡಲೇ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ತಮ್ಮ ಮುಖೇನ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಾದ ಸದಾನಂದಗೌಡರಿಗೆ ವಿನಂತಿ ಮಾಡುತ್ತೇನೆ. ನೀವೆಲ್ಲರೂ ಸೇರಿ ಹೋಗಿ ಕೂಡಲೇ ತೊಗರಿ ಆಮದನ್ನು ನಿಲ್ಲಿಸಬೇಕು. ಅದನ್ನು ಮಾರುಕಟ್ಟೆಯಲ್ಲಿ ಬಿಡಕೂಡದು. ನಮ್ಮ ರೈತ ಬೆಳೆದಂತಹ ಬೆಳೆಯನ್ನು ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆಗೆ ಮಾರಾಟ ಮಾಡಬೇಕು. ನಮ್ಮ ರೈತ ಬರಗಾಲದ ಛಾಯೆ, ರೋಗದ ಛಾಯೆ, ಬೆಲೆ ಕುಸಿತ ಇವೆಲ್ಲ ತೊಂದರೆಯಿಂದ ಅವನನ್ನು ಪಾರು ಮಾಡುವಂತಹ ಜವಾಬ್ದಾರಿ ರಾಜ್ಯ ಸರ್ಕಾರದ್ದು ಎಷ್ಟಿದೆಯೋ, ಅಷ್ಟೇ ಜವಾಬ್ದಾರಿ ಕೇಂದ್ರ ಸರ್ಕಾರದ್ದೂ ಕೂಡ ಇದೆ. ಆ ಕಾರಣದಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. ಈ ಸದನ ಮುಗಿದ ತಕ್ಷಣ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಕ್ಕೆ ನಾವೆಲ್ಲರೂ ಸೇರಿ ಹೋಗಿ, ಅಲ್ಲಿಂದ ಬರುವಂತಹ ತೊಗರಿ ಬೇಳೆಯನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಮುಂದುವರೆಸೋಣ. ಅದಲ್ಲದೆ ಇವತ್ತು 1800 ಸಣ್ಣ ಮತ್ತು ಅತೀ ಸಣ್ಣ ರೈತರಿಂದ ತೊಗರಿಯನ್ನು ಖರೀದಿ ಮಾಡಿದ್ದೇವೆ. ಇವತ್ತು ಇನ್ನು ತೊಗರಿಯನ್ನು ಖರೀದಿ ಮಾಡಬೇಕೆಂದು ಏನು ಚಿಂತನೆ ಇದೆ, ಅಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿ, ದಳ್ಳಾಳಿಗಳು ರೈತರನ್ನು ಮುಂದು ಮಾಡಿಕೊಂಡು ಮಾರುಕಟ್ಟೆಗೆ ತರುವಂತಹ ಪ್ರಯತ್ನಗಳು ನಡೆಯುತ್ತಿರುವುದು ಗಮನಕ್ಕೆ ಬಂದಿರುವುದರಿಂದ ಇವತ್ತು ನಾವು ಸ್ಥಗಿತಗೊಳಿಸಿದ್ದೇವೆ. ಕೇಂದ್ರ ಸರ್ಕಾರ ಕೂಡಲೇ ತೊಗರಿಯನ್ನು ಆಮದು ಮಾಡುವುದನ್ನು ನಿಲ್ಲಿಸಿದ್ದಾದರೆ, ನಮ್ಮ ರಾಜ್ಯ ಸರ್ಕಾರ ರೈತರ ಸಹಾಯಕ್ಕೆ ಹಿಂದುಮುಂದು ನೋಡುವಂತಹ ಪ್ರಶ್ನೆ ಬರುವುದಿಲ್ಲ. ಆದರೆ ಅದನ್ನು ನಿಲ್ಲಿಸುವವರೆಗೂ ನಾವು ಯಾವುದೇ ರೀತಿ ಖರೀದಿಗಳನ್ನು ಮಾಡಿದ್ದಾದರೆ ಸರ್ಕಾರ ತೊಂದರೆಗೆ ಸಿಕ್ಕಿಹಾಕಿಕೊಳ್ಳುವುದಲ್ಲದೆ ಏನೂ ಪ್ರಯೋಜನವಿಲ್ಲದ ಹಾಗೆ ಆಗುತ್ತದೆ. ಇದಲ್ಲದೆ ಕಳೆದ ಮೂರ್ನಾಲ್ಕು ವರ್ಷಗಳ ಇತಿಹಾಸ ತೆಗೆದು ನೋಡಿದಾಗ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಆ ಭಾಗದಲ್ಲಿ ತೊಗರಿ ಬೆಳೆಯುವಂತಹ ರೈತರಿಗಿಂತ ಮುಂಚಿತವಾಗಿ ಕೆಲವು ಜನ ಚಿಕ್ಕಪುಟ್ಟ ರಾಜಕಾರಣಿಗಳು ಇನ್ನೂ ತೊಗರಿ ಬೆಳೆ ಬಂದಿರುವುದಿಲ್ಲ, ಆಗಲೇ ಗಲಾಟೆ, ಗಲಭೆ ಮಾಡಿ ತಹಸೀಲ್ದಾರ್ ಆಫೀಸಿಗೆ ಬೀಗ ಹಾಕುವಂತಹ ಕೆಲಸವನ್ನು ಮಾಡುತ್ತಾರೆ. ಈ ರೀತಿ ರಾಜಕೀಯಕ್ಕೆ ಪರಿವರ್ತನೆ ಮಾಡುವಂತಹ

ಕಾರ್ಯಕ್ರಮ ನಮ್ಮ ಗಮನಕ್ಕೆ ಬಂದಿದ್ದು, ಇದನ್ನು ನಾವು ಮುಂದುವರೆಸುವುದಕ್ಕೆ ಬಿಡುವುದಿಲ್ಲ. ಆಮೇಲೆ ಸರ್ಕಾರ intervention ಮಾಡುವ ಕಾರ್ಯಕ್ರಮವೇನು? ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡಿ intervention ಮಾಡಿದಾಗ ಕೂಡಲೇ ಸರ್ಕಾರದ ಮುಂದೆ ಹೋಗುತ್ತದೆ. ಆದರೆ ಇವತ್ತು ವ್ಯಾಪಾರಸ್ಥರು ring ಮಾಡಿಕೊಂಡು, 3500 ರಿಂದ 3600 ಮೇಲೆ ಹೋಗದಂತೆ ಅವರೂ maintain ಮಾಡುತ್ತಿದ್ದಾರೆ. ಅದಲ್ಲದೆ ಈ ದೇಶದಲ್ಲಿ ನಮ್ಮ ರಾಜ್ಯದ ಪಕ್ಕದಲ್ಲಿರುವ ತೊಗರಿ ಬೆಳೆಯುವಂತಹ ಯಾವುದೇ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ ತೆಗೆದುಕೊಂಡರೆ, ಅಲ್ಲಿನ ರಾಜ್ಯ ಸರ್ಕಾರಗಳು ಬೆಂಬಲ ಬೆಲೆಯನ್ನು ಘೋಷಣೆ ಮಾಡುವಂತಹ ಚಿಂತನೆಯನ್ನು ಮಾಡಲಿಲ್ಲ ಮತ್ತು ಖರೀದಿಯನ್ನು ಪ್ರಾರಂಭ ಮಾಡುವಂತಹ ಪ್ರಯತ್ನವನ್ನೂ ಕೂಡ ಮಾಡಲಿಲ್ಲ. ಆದರೆ ದೇಶದಲ್ಲಿ ನಮ್ಮ ರಾಜ್ಯದ ಒಂದೇ ಒಂದು ಸರ್ಕಾರ ತೊಗರಿ ಬೆಳೆಯುವ ರೈತರಿಗೆ ತೊಂದರೆಯಾಗಬಾರದು, ಅವರು ಏನು ಬರಗಾಲ ಮತ್ತು ರೋಗದಿಂದ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ ಅವರ ಸಹಾಯಕ್ಕೆ ಹೋಗಿ ಬೆಂಬಲ ಬೆಲೆ ಘೋಷಣೆ ಮಾಡಿ market intervention ಮಾಡಿದ್ದು ನಿಜ. ಈಗಾಗಲೇ procurement ಮಾಡಿದ್ದೇವೆ. ನಾನು ತಮ್ಮ ಮುಖೇನ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುವುದೇನೆಂದರೆ ಕೇಂದ್ರ ಸರ್ಕಾರ ಕೂಡಲೇ ಆಮದು ಮಾಡುವುದನ್ನು ನಿಲ್ಲಿಸದ ಹೊರತು ಯಾವುದೇ ರೀತಿಯಲ್ಲೂ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ನಾವೆಲ್ಲ ಕೂಡ ಕೇಂದ್ರ ಸರ್ಕಾರವನ್ನು ಮನವಿ ಮಾಡೋಣ. ಸದನದಲ್ಲಿ ಒಂದು ಠರಾವನ್ನು ಪಾಸ್ ಮಾಡಿ ಕಳುಹಿಸುವ ಮತ್ತು ಒಂದು ನಿಯೋಗ ಅಲ್ಲಿಗೆ ಹೋಗುವಂತಹ ಪ್ರಯತ್ನವನ್ನು ಮಾಡಿ ಆಮದು ಆಗುವುದನ್ನು ನಿಲ್ಲಿಸುವ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳುತ್ತಾ, ನಮ್ಮ ರೈತರು ಬೆಳೆದಂತಹ ತೊಗರಿಯನ್ನು ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರ ಹಿಂದೆಮುಂದೆ ನೋಡುವಂತಹ ಪ್ರಶ್ನೆಯಿಲ್ಲ. ಆ ಕಾರಣದಿಂದ ಇವತ್ತು ಆಮದು ಆಗುವಂತಹ ತೊಗರಿ, ದಳ್ಳಾಳಿಗಳ ಹಾವಳಿ ಮತ್ತು ನಮಗೆ ಇಡುವುದಕ್ಕೆ ಗೋಡೌನುಗಳು ಸೌಲಭ್ಯಗಳಿಲ್ಲದೆ ಇರುವಂತಹ ತೊಂದರೆಗಳಿಂದ ಖರೀದಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಇದೇನು? ಅದಕ್ಕೆ ನಾನು ಹೇಳಿದ್ದು. ಇದು ಉತ್ತರವೇ? ನೀವು ಕೊಟ್ಟಿರುವಂತಹ ಉತ್ತರದಲ್ಲಿ ಇದೆಲ್ಲ ಇದೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– Immediate ಆಗಿ, intervene ಆಗಿ, ಅಲ್ಲಿ ರೈತರು ತೊಗರಿ ತಂದು ಹಾಕಿದ್ದಾರೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ :– ಮಾನ್ಯ ಅಧ್ಯಕ್ಷರೆ, ಅಲ್ಲಿ ಒಂದು ತಿಂಗಳು ಖರೀದಿ ಮಾಡಿದ್ದೇವೆಂದು ಹೇಳಿದ್ದಾರೆ, ಆದರೆ ಅವರು ನಿಜವಾಗಿ ಖರೀದಿ ಮಾಡಿದ್ದು 2–3 ದಿವಸ ಮಾತ್ರ ಅಷ್ಟೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು, ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್, ಶ್ರೀ ರಹೀಂ ಖಾನ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಅಧ್ಯಕ್ಷರು :– ಇಲ್ಲಿ ಮಾತನಾಡಬೇಡಿ. ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ಅವರು ಕಾರಣ ಹೇಳಿದ್ದಾರಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ರಾತ್ರಿ 8.10 ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ : 28.03.2012 ರಂದು ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

8. ಅನುಬಂಧ–1

ರೈಲ್ವೆ ಮಾರ್ಗದ ಕಾಮಗಾರಿ ವಿಳಂಬ

69 : (98)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಮುನಿರಾಬಾದ್ (ಗಿಣಿಗೇರಾ) – ಮೆಹಬೂಬ್ ನಗರ ಹೊಸ ರೈಲ್ವೆ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ರೈಲ್ವೆ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು;